ಜೀವಜಾಲ



# ಹಸಿರು ಹಾವಿನ ವೇಷಾಂತರ!

■ ಪ್ರಕಾಶ ಎಸ್. ಮನ್ನಂಗಿ





ಜಿಟಿ ಜಿಟಿ ಮಳೆಯ ಸಮಯದಲ್ಲಿ ಇತ್ತೀಚೆಗೆ ಜಲುಂಚಳ್ಳಿ ಜಲಪಾತಕ್ಕೆ ಹೋಗಿದ್ದೆ. ಕಚ್ಚಾ ರಸ್ತೆಯಲ್ಲಿ ಸಾಗುತ್ತಿದ್ದಾಗ ಗಿಡವೊಂದರ ಎಲೆಗಳ ನಡುವೆ ಏನೋ ಚಲಿಸಿದಂತಾಯ್ತು. ಕುತೂಹಲದಿಂದ ಕಣ್ಣು ಚುರುಕಾಗಿಸಿಕೊಂಡು ನೋಡಿದೆ, ಹಸಿರು ಹಾವು! ಅದರ ಚಲನವಲನ ನಿರುಕಿಸುತ್ತ ಸಾಗಿದೆ.

ಹಸಿರು ಹಾವುಗಳು ನಮ್ಮ ಪಶ್ಚಿಮ ಘಟ್ಟದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಬಾಂಗ್ಲಾ, ಶ್ರೀಲಂಕಾ, ಥಾಯ್ಲೆಂಡ್ ದೇಶಗಳಲ್ಲೂ ಇವು ಹೆಚ್ಚು. ಕಪ್ಪೆ, ಸರೀಸೃಪಗಳು ಇವುಗಳ ಆಹಾರ.

ಹಗಲಿನಲ್ಲಿ ಗಿಡಮರಗಳಲ್ಲಿ ತೆವಳುವ ಹಾವನ್ನು ಹಸಿರು ಎಲೆಗಳಲ್ಲಿ ಗುರುತಿಸುವುದೇ ಕಷ್ಟ. ವೈರಿಗಳು ಸುಲಭವಾಗಿ ಗುರುತಿಸದಿರಲೆಂದು ಹಸಿರು ಹಾವು ಮಾಡಿಕೊಂಡ ವರ್ಣ ಹುನ್ನಾರವಿದು. ಹಸಿರು ಬಣ್ಣದಿಂದಾಗಿ ಎಲೆಗಳ ನಡುವೆ ತನ್ನನ್ನು ಮರೆಮಾಚಿಕೊಳ್ಳುತ್ತದೆ.

ಕೊರುಬ್ರಿಡೇ ಕುಟುಂಬಕ್ಕೆ ಸೇರಿದ ಹಸಿರು ಹಾವಿನ ವೈಜ್ಞಾನಿಕ ಹೆಸರು ಅಹೇತುಲ್ಲ ನಾಸುಟ. ಇದು ಗಿಡಗಳಲ್ಲಿ ಬಳ್ಳಿಯಂತೆ ಬಳುಕುವುದರಿಂದ 'ಹಸಿರು ಬಳ್ಳಿ ಹಾವು' ಎಂತಲೂ ಕರೆಯುವರು.

ಹಸಿರು ಹಾವು ಸೌಮ್ಯವಾದುದು. ಇದು ಕಚ್ಚುವುದಿಲ್ಲ. ಕಚ್ಚಿದರೂ ಜೀವಕ್ಕೇನೂ ಅಪಾಯವಿಲ್ಲ. ಹೆಚ್ಚೆಂದರೆ, ಬಾವು–ನೋವು ಉಂಟಾಗಬಹುದಷ್ಟೇ! ಈ ಸಂಕಟ ಮೂರು ದಿನಗಳವರೆಗೆ ಉಳಿಯಬಹುದು. ಆದರೆ ಕಣ್ಣು, ತಲೆಯ ಹತ್ತಿರ ಹಾವು ಕಚ್ಚಿದರೆ ಚಿಕಿತ್ಸೆ ಅಗತ್ಯ.

ಅಪಾಯ ಎದುರಾದರೆ ಹಸಿರು ಹಾವು ತನ್ನ ದೇಹವನ್ನು ಹಿಗ್ಗಿಸುತ್ತದೆ. ಆಗ ಮೈಮೇಲೆ ಕಪ್ಪು ಮತ್ತು ಬಿಳಿಯ ಕಲೆಗಳು ಗೋಚರಿಸುತ್ತವೆ. ಅಪಾಯ ಕಂಡುಬಂದ ದಿಕ್ಕಿನಲ್ಲಿ ಬಾಯ್ತೆರೆದು ನಿಲ್ಲುತ್ತದೆ. ಎದುರಾಳಿಯನ್ನು ಭಯಗೊಳಿಸುತ್ತದೆ.

ಉಳಿದ ಹಾವುಗಳಂತೆ ಹಸಿರು ಹಾವು ಮೊಟ್ಟೆಗಳನ್ನಿಡುವುದಿಲ್ಲ. ಮರಿಗಳಿಗೆ ಜನ್ಮ ನೀಡುತ್ತದೆ. ಇದರ ದೇಹದೊಳಗಿನ ಚೀಲದಲ್ಲಿ ಮರಿಗಳ ಬೆಳವಣಿಗೆಯಾಗುತ್ತದೆ.

ಚಿತ್ರಗಳು: ಆಕಾಶ


ಆರೋಗ್ಯಕರವಾದ ಸವಿಯನ್ನು ಆನಂದಿಸಿ

Along with HERBS
100% NATURAL
ARECA TEA
HEALTHY • TASTY • REFRESHING

ಇತರ ಚಹಾಗಳಿಗಿಂತ ಹೆಚ್ಚಿನ ಆ್ಯಂಟಿಆಕ್ಸಿಡೆಂಟ್ ಗುಣಗಳನ್ನು ಹೊಂದಿದೆ.

ಮಧುಮೇಹ ನಿರ್ವಹಣೆಯಲ್ಲಿ ಸಾಬೀತಾಗಿದೆ.

ಕೊಲೆಸ್ಟರಾಲ್ ಅನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತದೆ.

ಶಕ್ತಿಯನ್ನು ಹೆಚ್ಚಿಸುತ್ತದೆ.

ಒತ್ತಡವನ್ನು ನಿವಾರಿಸುತ್ತದೆ.

ದೀರ್ಘಕಾಲೀನ ಬಳಕೆಯಲ್ಲಿ ಸುರಕ್ಷಿತ.




ಆರೋಗ್ಯಕರ • ರುಚಿಕರ • ಉಲ್ಲಾಸಕರ

5 ರುಚಿಕರ ಸ್ವಾದಗಳಲ್ಲಿ ಲಭ್ಯ
ಪುದೀನ, ಶುಂಠಿ, ರೆಗ್ಯುಲರ್, ನಿಂಬೆ ಮತ್ತು ತುಳಸಿ

WORLD'S FIRST ARECA TEA
INNOVATIVE PRODUCT OF THE YEAR 2015 MAKE IN INDIA EXCELLENCE AWARD
ENTREPRENEURIAL INNOVATION 2017
BEST AGRO FOOD STARTUP 2018

ಪ್ರಮೋಟರ್ಸ್: ಗ್ರೀನ್ ರೆಮೆಡೀಸ್, ಉಡುಪಿ
+91 820 252 9023
ಕಸ್ಟಮರ್ ಕೇರ್ ನಂ:
+91 80 2672 6337 / +91 63610 08174
ಇ ಮೇಲ್: info@arecatea.in
ಆನ್‌ಲೈನ್ ನಲ್ಲಿ ಖರೀದಿಸಿ
amazon | bigbasket India's largest online supermarket | Flipkart

www.arecatea.in ನಲ್ಲೂ ಲಭ್ಯ